**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ.**

**<u>ಸಿ.ಸಿ ನಂಃ 587/ 2020</u>**

| | | |
|---|---|---|
| ಸಾಕ್ಷಿಯ ಹೆಸರುಃ | ಶೇಖರ | ಪ್ರಾಸಾಃ 2 |
| ತಂದೆಯ ಹೆಸರುಃ | ಸಣ್ಣಯ್ಯ | ಚಾಸಾಃ 2 |
| ವಯಸ್ಸುಃ | 50 ವರ್ಷ | ದಿಃ 03-10-2024 |
| ಉದ್ಯೋಗಃ | ಭದ್ರತಾ ಸಿಬ್ಬಂದಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ಹಾಲಿ ವಾಸ ಸ್ಥಳಃ | ಮೈಸೂರು | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>**

ಆರೋಪಿ ನನ್ನ ಪಕ್ಕದ ಮನೆಯವರಾಗಿರುತ್ತಾರೆ. ಚಾಸಾ 1, 3 ಮತ್ತು 4 ರವರು ನನ್ನ ಸಂಬಂಧಿಕರು. 2019 ರ ಡಿಸೆಂಬರ್ ತಿಂಗಳಿನಲ್ಲಿ ಸಂಜೆ 4 ಗಂಟೆಗೆ ಹುಲ್ಲಿನ ಮೇಯಿದೆಯ ವಿಚಾರಕ್ಕೆ ಆರೋಪಿ ಮತ್ತು ಚಾಸಾ 1 ರವರು ಮಧ್ಯೆ ಜಗಳವಾಗಿರುತ್ತದೆ. ಆರೋಪಿಯು ಕಲ್ಲಿನಿಂದ ಚಾಸಾ 1 ರವರ ತಲೆಗೆ ಹೊಡೆದು ಹಲ್ಲೆ ಮಾಡಿರುತ್ತಾರೆ. ಸದರಿ ಹಲ್ಲೆಯಿಂದಾಗಿ ಚಾಸಾ 1 ರವರ ತಲೆಗೆ ರಕ್ತಗಾಯವಾಗಿ, ಪ್ರಜ್ಞೆ ತಪ್ಪಿ ಬಿದ್ದಿರುತ್ತಾರೆ. ಚಾಸಾ 1 ರವರನ್ನು ನಾನು ಚಿಕಿತ್ಸೆಗಾಗಿ ಸಾಲಿಗ್ರಾಮದ ಸರಕಾರಿ ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿರುತ್ತೇನೆ. ಪೋಲಿಸರು ಆಸ್ಪತ್ರೆಗೆ ಬಂದು ಚಾಸಾ 1 ರವರ ಹೇಳಿಕೆಯನ್ನು ಪಡೆದಿರುತ್ತಾರೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಂ.ಸಿ.ಎಸ್ ವಕೀಲರಿಂದಃ</u>**

1. ನಾನು ನರಚನಹಳ್ಳಿ ಗ್ರಾಮದ ನಿವಾಸಿಯಾಗಿದ್ದು, ಈಗ ಸುಮಾರು 5-6 ತಿಂಗಳುಗಳಿಂದ ನಾನು ಮೈಸೂರಿನ ಊಟಗಳ್ಳಿಯಲ್ಲಿ ವಾಸವಿದ್ದೇನೆ. ಆರೋಪಿ ಮತ್ತು ಚಾಸಾ 1 ರವರ ಮಧ್ಯೆ ಜಗಳ ಮುಗಿದ ಬಳಿಕ ನಾನು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿ. ಚಾಸಾ 1 ರವರಿಗೆ ಕುಡಿತದ ಚಟವಿತ್ತು ಎಂದರೆ ಸರಿ. ಸುಮಾರು 10-15 ವರ್ಷಗಳಿಂದ ಚಾಸಾ 1 ರವರಿಗೆ ಕುಡಿತದ ಚಟವಿತ್ತು ಎಂದರೆ ಸರಿ. ಕುಡಿತದ ಅಮಲಿನಲ್ಲಿ ಚಾಸಾ 1 ರವರು ತಮ್ಮ ನಿಯಂತ್ರಣ ಕಳೆದುಕೊಳ್ಳುತ್ತಿದ್ದರು ಎಂದರೆ ಸರಿ. ತೀವ್ರವಾದ ಕುಡಿತದ ಚಟದಿಂದ ಚಾಸಾ 1 ರವರಿಗೆ

ಸರಿಯಾಗಿ ನಡೆದಾಡುವಷ್ಟು ಶಕ್ತಿ ಇರಲಿಲ್ಲ ಎಂದರೆ ಸರಿ. ನಡೆದಾಡಲು ಸರಿಯಾದ ಶಕ್ತಿ ಇಲ್ಲದಿದ್ದಾಗ ಸಾಮಾನ್ಯವಾಗಿ ವ್ಯಕ್ತಿಯು ಬಿದ್ದು ಗಾಯಮಾಡಿಕೊಳ್ಳುವುದು ಸಹಜ ಎಂದರೆ ಸರಿ.

2. ಚಾಸಾ 1 ರವರ ಗಾಯದಿಂದ ರಕ್ತ ಹರಿದು ಅವರ ಬಟ್ಟೆಗೆ ರಕ್ತದ ಕಲೆಯಾಗಿತ್ತು. ಸದರಿ ಚಾಸಾ 1 ರವರ ರಕ್ತದ ಕಲೆಯಾದ ಬಟ್ಟೆಯನ್ನು ನಾನು ಇಂದು ನ್ಯಾಯಾಲಯದಲ್ಲಿ ನೋಡಿರುವುದಿಲ್ಲ. ಆರೋಪಿಯು ಚಾಸಾ 1 ರವರಿಗೆ ಹಲ್ಲೆ ಮಾಡಿದ್ದಾರೆ ಎನ್ನಲಾದ ಕಲ್ಲನ್ನು ಸಹ ನಾನು ನ್ಯಾಯಾಲಯದಲ್ಲಾಗಲೀ ಅಥವಾ ಘಟನಾ ಸ್ಥಳದಲ್ಲಾಗಲೀ ನೋಡಿರುವುದಿಲ್ಲ. ನಾನು ಘಟನೆ ಮುಗಿದ ನಂತರ ಘಟನಾ ಸ್ಥಳಕ್ಕೆ ಹೋಗಿದ್ದು, ಘಟನೆಯಾದಾಗ ಘಟನಾ ಸ್ಥಳದಲ್ಲಿ ಯಾರೆಲ್ಲ ಇದ್ದರು ಎಂದು ನನಗೆ ಗೊತ್ತಿಲ್ಲ. ಘಟನೆ ನಡೆಯುವ 5 ವರ್ಷಗಳ ಹಿಂದಿನಿಂದಲೂ ಆರೋಪಿಯು ಹುಲ್ಲಿನ ಮೆದೆಯನ್ನು ಹಾಕಿದ್ದರು. ಘಟನೆಯಾಗುವ ಪೂರ್ವದಲ್ಲಿಯೇ ಆರೋಪಿಯು ಪ್ರತಿವರ್ಷ ಹುಲ್ಲಿನ ಮೆದೆಯನ್ನು ಹಾಕುವುದು ಮತ್ತು ಮಾಡುವುದು ಮಾಡುತ್ತಿದ್ದರು ಎಂದರೆ ಸರಿ.

3. ಘಟನೆಯಾದ ದಿನದಂದು ಚಾಸಾ 1 ರವರು ಸಾರಾಯಿ ಕುಡಿದಿದ್ದರು. ಆರೋಪಿಯ ಹುಲ್ಲಿನ ಮೆದೆಗೆ ಬೆಂಕಿ ಹಚ್ಚಲು ಚಾಸಾ 1 ರವರು ಹೋಗಿದ್ದರು ಎಂದರೆ ಸರಿ. ಘಟನಾ ದಿನದಂದು ಚಾಸಾ 1 ರವರು ಸಾರಾಯಿ ಕುಡಿದಿದ್ದು, ಅವರು ಕುಡಿತದ ಅಮಲಿನಲ್ಲಿ ಬಿದ್ದು ಸ್ವತಃ ಗಾಯಮಾಡಿಕೊಂಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಘಟನಾ ದಿನದಂದು ಚಾಸಾ 1 ರವರಿಗೆ ಆರೋಪಿ ಹಲ್ಲೆ ಮಾಡಿರುವುದಿಲ್ಲ ಬದಲಾಗಿ ಚಾಸಾ 1 ರವರು ಕುಡಿತದ ಅಮಲಿನಿಂದ ಕೆಳಗೆ ಬಿದ್ದು, ಸ್ವತಃ ಗಾಯಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಚಾಸಾ 1 ರವರ ಬಾಮೈದ ಎಂದರೆ ಸರಿ. ಸದರಿ ಕಾರಣದಿಂದ ನಾನು ಚಾಸಾ 1 ರವರ ಸುಳ್ಳು ದೂರಿಗೆ ಪೂರಕವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಘಟನಾ ದಿನದಂದು ನಾನು ಚಾಸಾ 1 ರವರನ್ನು ನನ್ನ ಬಾಮೈದನಾದ ಚಾಸಾ 6 ರವರ ಆಟೋದಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇನೆ. ಚಾಸಾ 1 ರವರನ್ನು ಕರೆದುಕೊಂಡ ಹೋದ ಆಟೋದ ನಂಬರ್ ನ್ನು ನಾನು ಪೋಲಿಸರಿಗೆ ಹೇಳಿರುವುದಿಲ್ಲ. ಸಾಕ್ಷಿಗೆ ಈಗ ಸ್ಥಳ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ತಾನು ಪೋಲಿಸ್ ಠಾಣೆಯಲ್ಲಿ ಮಾಡಿರುವುದಾಗಿ ಸಾಕ್ಷಿಯು ಹೇಳಿರುತ್ತಾರೆ. ಸ್ಥಳ ಮಹಜರ್ ಗೆ ಚಾಸಾ 5 ಮತ್ತು 6 ರವರು ಆಸ್ಪತ್ರೆಯಲ್ಲಿ ತಮ್ಮ ಸಹಿಗಳನ್ನು ಹಾಕಿರುತ್ತಾರೆ. ಸ್ಥಳ ಮಹಜರ್ ನ್ನು ಪೋಲಿಸರು ಆಸ್ಪತ್ರೆಯಲ್ಲಿ ತಯಾರಿಸಿರುತ್ತಾರೆ. ನನಗೆ ಈ

ಪ್ರಕರಣ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಚಾಸಾ 1 ರವರು ನನ್ನ ಸಂಬಂಧಿಕರಾಗಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು., ಕೆ.ಆರ್.ನಗರ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ.**

**<u>ಸಿ.ಸಿ ನಂಃ 587/ 2020</u>**

| | | |
|---|---|---|
| ಸಾಕ್ಷಿಯ ಹೆಸರುಃ | ರಾಜಮ್ಮ | ಫ್ರಾಸಾಃ 3 |
| ಗಂಡನ ಹೆಸರುಃ | ರಾಮಯ್ಯ | ಚಾಸಾಃ 4 |
| ವಯಸ್ಸುಃ | 55 ವರ್ಷ | ದಿಃ 03-10-2024 |
| ಉದ್ಯೋಗಃ | ವ್ಯವಸಾಯ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ಹಾಲಿ ವಾಸ ಸ್ಥಳಃ | ನರಚಹಳ್ಳಿ | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>**

ಆರೋಪಿ ಹಾಗೂ ಚಾಸಾ 1 ರಿಂದ 4 ರವರು ನನ್ನ ಸಂಬಂಧಿಕರಾಗಿರುತ್ತಾರೆ. ಹುಲ್ಲಿನ ಮೇಯಿದೆಯ ವಿಚಾರಕ್ಕೆ ಆರೋಪಿ ಮತ್ತು ಚಾಸಾ 1 ರವರು ಮದ್ಯೆ ಕಲ್ಲಿನಿಂದ ಜಗಳವಾಗಿರುತ್ತದೆ. ನಾನು ಸದರಿ ಕಲ್ಲನ್ನು ಸರಿಯಾಗಿ ನೋಡಿರುವುದಿಲ್ಲ. ಆರೋಪಿ ಮತ್ತು ಚಾಸಾ 1 ರವರು ಯಾವುದೋ ಉದ್ವೇಗದಿಂದ ಜಗಳವಾಡಿರುತ್ತಾರೆ. ಅವರಿಬ್ಬರಿಗೂ ಸಂಸಾರವಿದೆ ಆದ್ದರಿಂದ ಈ ಪ್ರಕರಣವನ್ನು ದಯವಿಟ್ಟು ಇಲ್ಲಿಯೇ ಮುಕ್ತಾಯಗೊಳಿಸಿ ಎಂದು ಚಾಸಾ 4 ರವರು ಹೇಳಿರುತ್ತಾರೆ.

ಈ ಹಂತದಲ್ಲಿ ಕೃತ್ಯಕ್ಕೆ ಬಳಸಿದ ಕಲ್ಲು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವುದರಿಂದ, ಸಾಕ್ಷಿದಾರರ ಮುಂದುವರೆದ ಮುಖ್ಯ ವಿಚಾರಣೆಗೆ ಸಹಾಯಕ ಸರ್ಕಾರಿ ಅಭಿಯೋಜಕರು ಕಾಲಾವಕಾಶವನ್ನು ಕೋರಿರುತ್ತಾರೆ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು., ಕೆ.ಆರ್.ನಗರ**